

(6ನೇ ಪುಟದಿಂದ)

ಮೃತ್ಯುಲೋಕದ ಬಾಯಿಯಂತೆ ಕಾಣಿಸುವ ಈ ಗುಂಡಿಯಲ್ಲಿ, ಮೈ ತೊಳೆಯಲೆಂದು ಕರೆದೊಯ್ದ ಕೋಣಗಳು ಕಾಣೆಯಾಗಿರುವುದೂ ಇದೆಯಂತೆ. ಈ ಮಾರಣಾಂತಿಕ ಗುಣದಿಂದಲೇ ಜಲಪಾತಕ್ಕೆ 'ಎರುಗುಂಡಿ' ಎನ್ನುವ ಹೆಸರು. ಈ ಗುಂಡಿಯಲ್ಲಿ ಬಿರು ಬೇಸಗೆಯಲ್ಲೂ ನೀರಿರುತ್ತದೆ. ಭಾರೀ ಸುಳಿಯೂ ಇದೆ. ಗುಂಡಿಯಲ್ಲಿ ಇಳಿದ ಯಾರೂ ಜೀವ ಸಹಿತ ಮೇಲೆ ಬಂದಿಲ್ಲ ಎನ್ನುತ್ತಾರೆ ಸ್ಥಳೀಯರು.

'ಎರುಗುಂಡಿ' ಜಲಪಾತದ ವಿಶೇಷ ಇರುವುದು ಜಲಧಾರೆಯ ನಡುವೆ ಹೋಗಿ ನಿಲ್ಲಬಹುದು ಎನ್ನುವುದರಲ್ಲಿ. ಇದಕ್ಕೆ ಅನುಕೂಲವಾಗುವಂತೆ ಹಳೆಯ ಕಿಂಡಿ ಅಣೆಕಟ್ಟಿನ ರಚನೆ ಇದೆ. ಇದರ ಮೇಲೆ ಸಾಗಿ, ಬಂಡೆಗಳನ್ನು ಜಾಗ್ರತೆಯಿಂದ ದಾಟಿದರೆ ಜಲಪಾತದ ನಡುವೆ ತಲುಪಬಹುದು. ಸುತ್ತ ಧುಮುಕುವ ನೀರು ಅಬ್ಬರದೊಂದಿಗೆ ಬೆಳ್ನೊರೆಯನ್ನು ಚೆಲ್ಲುತ್ತಿರುತ್ತದೆ. ಬಂಡೆಯಲ್ಲಿ ಪಾಚಿ ಇರುವುದರಿಂದ ಜಾರುವ ಸಂಭವ ಹೆಚ್ಚು.

ಇತ್ತೀಚೆಗೆ ಇಲ್ಲಿ ಜೀವಹಾನಿಯ ಪ್ರಸಂಗಗಳು ಸಂಭವಿಸಿರುವುದರಿಂದ ಮೂಡಬಿದಿರೆ ಪೊಲೀಸರು ಆಗಾಗ ಒಂದು ರೌಂಡ್ ಬಂದುಹೋಗುವುದೂ ಇದೆ. ಕೆಲವರು ಬೇಜವಾಬ್ದಾರಿಯಿಂದ ಅಥವಾ ಉನ್ಮಾದದಿಂದ ಕುಡಿದು ಎಸೆದ ಬಾಟಲಿಗಳು ಬಂಡೆಗಳ ತಳದಲ್ಲಿವೆ. ಕೆಲವು ವಿಘ್ನ ಸಂತೋಷಿಗಳು ಆ ಬಾಟಲಿಗಳನ್ನು ಬಂಡೆಗಳಿಗೆ ಅಪ್ಪಳಿಸಿ ಹುಡಿ ಮಾಡುವುದೂ ಇದೆ.

ಇಲ್ಲಿಯ ಬೃಹತ್ ಬಂಡೆಗಳನ್ನು ಸೂಕ್ಷ್ಮವಾಗಿ ನೋಡಿದರೆ ಆನೆಯೊಂದು ಮಲಗಿದಂತೆ, ಮೊಸಳೆಯೊಂದು ಅರೆ ಬಾಯಿ ತೆರೆದಂತೆ ಜೋಡಣೆಗೊಂಡ ದೃಶ್ಯಗಳು ಗೋಚರಿಸುತ್ತವೆ. ಬೃಹತ್ ಕರಿ ಬಂಡೆಯೊಂದರ ಮೇಲೆ ಆನೆ ಮಲಗಿದಂತೆ ಕಾಣಿಸುತ್ತದೆ. ಆನೆಯ ಭಾರಕ್ಕೆ ಹಾಸಿಗೆಯಾದಂತಿರುವ ಬಂಡೆ ಆಯ ತಪ್ಪಿ ಜಾರದಂತಿರಲು, ಸಣ್ಣ ಕಲ್ಲನ್ನು ಆಧಾರವಾಗಿ ನೀಡಿ ಸಮತೋಲನ ಕಾಯ್ದುಕೊಂಡಂತೆ ಕಾಣುವ ಬೃಹತ್ ಬಂಡೆ ನಿಸರ್ಗವೇ ರೂಪಿಸಿದ ಶಿಲ್ಪದಂತಿದೆ. ಇದೊಂದು ನಿಸರ್ಗದ ಚಿತ್ರಲಿಪಿ. ಅವರವರ ಭಾವಕ್ಕೆ ತಕ್ಕಂತೆ ಏನಾದರೂ ಅರ್ಥೈಸಿಕೊಳ್ಳಿ ಎಂದು ಬೀಡುಬೀಸಾಗಿ ಹೇಳಿ ನೀರು ಇಲ್ಲಿಂದ ನಿರ್ಲಿಪ್ತವಾಗಿ ಹರಿದುಹೋಗಿದೆ.

ಜಲಪಾತದ ನೀರು ಬಂಡೆಯ ಮೇಲೆ ಧುಮ್ಮಿಕ್ಕಿ ಪುಟಿದೇಳುವಾಗ ಆ ನೀರು ಸೀತೆ ಸೆರಗು ಬೀಸಿದಂತೆ ಕಾಣುತ್ತದೆ ಎಂದು ಜನರು ಹೇಳುತ್ತಾರೆ. ಈ ಜಲಪಾತಕ್ಕೆ 'ಕಂಚಿ ಬೈಲು ಜಲಪಾತ' ಎಂಬ ಹೆಸರೂ ಇದೆ. ಜಾಗಟೆ ಕಲ್ಲು ಎಂಬ ಕಲ್ಲು ಇಲ್ಲಿದೆ. ಬೇಸಿಗೆಯಲ್ಲಿ ಈ ಬಂಡೆಗೆ ಬಡಿದರೆ ಅದು ಜಾಗಟೆಯ ಶಬ್ದವನ್ನು ಹೊರಡಿಸುತ್ತದೆಯಂತೆ.

ಜಲಪಾತದಲ್ಲಿ ಬಂಡೆಗಳ ನಡುವೆ ಧುಮ್ಮಿಕ್ಕಿ ಮುಂದೆ ಸಾಗುವ ನದಿ ತನ್ನ ಮುಂದಿನ ಪಯಣದಲ್ಲಿಯೂ ಅನೇಕ ಗುಂಡಿಗಳನ್ನು ಸೃಷ್ಟಿ ಮಾಡಿದೆ. ಮೀಪು ಗುಂಡಿ, ಭೂತಗುಂಡಿ, ಎರ್ಮಾಳು ಗುಂಡಿ, ದೇವಿ ಗುಂಡಿ, ನಾಗರ ಗುಂಡಿ ಎಂಬೆಲ್ಲ ಹೆಸರಿನ ಈ ಗುಂಡಿಗಳು ಬೇಸಗೆಯಲ್ಲಿ ಕೃಷಿಗೆ ನೀರೊದಗಿಸುವ ಮೂಲಗಳಾಗಿವೆ.

ಮುಕ್ಕಡಪ್ಪು ಎಂಬಲ್ಲಿ ಶಾಂಭವಿ ನದಿಯನ್ನು ಸೇರುವ ಮೂಲಕ ತನ್ನ ಸ್ವಂತ ಅಸ್ತಿತ್ವವನ್ನು ಕಳೆದುಕೊಳ್ಳುವ ಅನಾಮಧೇಯ ನದಿ ತನ್ನ ಯಾನದಲ್ಲಿ ಸೃಷ್ಟಿಸುವ ಈ ಅದ್ಭುತ ಜಲಪಾತ, ನದಿಯ ಶಕ್ತಿ ಮತ್ತು ರುದ್ರರಮಣೀಯತೆಗೆ ಒಂದು ಕನ್ನಡಿ. ಬೇಸಗೆಯಲ್ಲಿ ಜಲಪಾತ ಒಣಗುತ್ತದೆ. ಆದರೆ ಅದರ ಮೇಲ್ಭಾಗದಲ್ಲಿ ನಿರ್ಮಾಣಗೊಂಡಿರುವ ಕಿಂಡಿ ಅಣೆಕಟ್ಟಿನಲ್ಲಿ ಜಲಪಾತದ ನೀರು ನೆಲೆಗೊಂಡಿರುತ್ತದೆ. ಈ ಜಲಾಶಯ ನೂರಾರು ಎಕರೆ ಕೃಷಿ ಭೂಮಿಗೆ ನೀರಿನ ಆಧಾರ.